ಸತ್ಯಗಳೆಲ್ಲವೂ ಹಳೆಯವೆ. ನಾವು ಅವನ್ನು ಹೊಸ ರೀತಿಯಲ್ಲಿ ಗುರುತಿಸಬೇಕು ಮತ್ತು ವಿವರಿಸಬೇಕು. —ಗಯಟೆ

ಮನುಷ್ಯನು ಪ್ರಜ್ಞಾಪೂರ್ವಕ ಪ್ರಯತ್ನದಿಂದ ತನ್ನ ಜೀವನವನ್ನು ಉನ್ನತಿಗೇರಿಸುವ ನಿಶ್ಚಿತ ಸಾಮರ್ಥ್ಯಕ್ಕಿಂತ ಮೇಲಾದುದನ್ನು ನಾನರಿಯೆ. —ಥೋರೋ

ಭಗವಂತನು ಕಿವುಡನಲ್ಲ, ಆದರೆ ಮನುಷ್ಯನ ಹೃದಯ ಮೂಕವಾಗಿದೆ. —ಕ್ವಾರ್ಲೀಸ್ (Quarles)

ಚೈತನ್ಯವಿಲ್ಲದ ದೇಹ ಸತ್ತಿರುವಂತೆ ಸತ್ಕಾರ್ಯರಹಿತ ಶ್ರದ್ಧೆಯೂ ಮೃತಪ್ರಾಯವೇ. —ಜೇಮ್ಸ್

ಪ್ರೀತಿ ಚಂದ್ರನಿರುವಂತೆ. ಅದು ವೃದ್ಧಿಯಾಗದಿದ್ದರೆ ಕ್ಷೀಣಿಸುತ್ತದೆ. —ಸೆಗುರ್ (Segur)

ಅತ್ಯಂತ ಸುಂದರ ಜೀವನ ನಡೆಸುವವನೇ ಅತ್ಯಂತ ಶ್ರೇಷ್ಠ ಕಲಾಕಾರ. —ಗಾಂಧೀಜಿ

ನಾನು ಸ್ವರ್ಗದಲ್ಲಿರುವುದಕ್ಕೆ ಮುಂಚೆ ಸ್ವರ್ಗ ನನ್ನಲ್ಲಿರಬೇಕು. —ಸ್ಟಾನ್‌ಫೋರ್ಡ್

ಮೂರ್ಖನಿಗೆ ದುಷ್ಕೃತ್ಯ, ಅದು ಫಲ ನೀಡದವರೆಗೆ, ಮಧುವಿನಂತೆ ಸಿಹಿಯಾಗಿರುತ್ತದೆ. ಆದರೆ ಅದು ಪಕ್ವವಾದ ಮೇಲೆ ದುಃಖಿಸುತ್ತಾನೆ. —ಬುದ್ಧ

ಪಾತ್ರಾಪಾತ್ರ ವಿವೇಕೋಽಸ್ತಿ
ಧೇನುಪನ್ನಗಯೋರಿವ ।
ತೃಣಾತ್ಸಂಜಾಯತೇ ಕ್ಷೀರಂ
ಕ್ಷೀರಾತ್ಸಂಜಾಯತೇ ವಿಷಮ್ ॥

"ಪಾತ್ರ ಅಪಾತ್ರ ಎಂಬ ವಿವೇಕ ಇದ್ದೇ ಇದೆ—ಹಸು ಮತ್ತು ಹಾವಿಗೆ ಇರುವ ಭೇದದಂತೆ ಇದು. ಹಸು ಹುಲ್ಲನ್ನು ತಿಂದು ಹಾಲನ್ನು ಕೊಡುತ್ತದೆ ಮತ್ತು ಆ ಹಾಲನ್ನು ಕುಡಿದು ಹಾವು ವಿಷವನ್ನು ನೀಡುತ್ತದೆ!"

ಅಶ್ವಂ ನೈವ ಗಜಂ ನೈವ
ವ್ಯಾಘ್ರಂ ನೈವ ಚ ನೈವ ಚ ।
ಅಜಾಪುತ್ರಂ ಬಲಿಂ ದದ್ಯಾತ್
ದೈವೋ ದುರ್ಬಲಘಾತಕಃ ॥

"ಕುದುರೆಯನ್ನಾಗಲಿ ಆನೆಯನ್ನಾಗಲಿ ದೇವತೆಗೆ ಬಲಿಕೊಡುವುದಿಲ್ಲ, ವ್ಯಾಘ್ರವನ್ನಂತೂ ಇಲ್ಲವೇ ಇಲ್ಲ. ಆಡಿನ ಮರಿಯನ್ನು ಮಾತ್ರ ಬಲಿಕೊಡುತ್ತಾರೆ. ದುರ್ಬಲರನ್ನು ದೈವವೂ ನಾಶಮಾಡುತ್ತದೆ."

# ಪ್ರಾರ್ಥನೆ

ಶ್ರೀಮದ್ಭಾಗವತದಲ್ಲಿನ ಕುಂತಿಯ ಪ್ರಾರ್ಥನೆ
"ಶ್ರೀಕೃಷ್ಣಸ್ತವ"

ನಮಸ್ಯೇ ಪುರುಷಂ ತ್ವಾದ್ಯಮೀಶ್ವರಂ ಪ್ರಕೃತೇಃ ಪರಮ್ ।
ಅಲಕ್ಷ್ಯಂ ಸರ್ವಭೂತಾನಾಮಂತರ್ಬಹಿರವಸ್ಥಿತಮ್ ॥ ೧ ॥

ಆದ್ಯನೂ, ಈಶ್ವರನೂ, ಪ್ರಕೃತಿಗಿಂತ ಶ್ರೇಷ್ಠನೂ, ಅಗೋಚರನೂ, ಸರ್ವಭೂತಗಳ ಒಳಗೂ ಹೊರಗೂ ಇರುವವನೂ ಆದ ಪುರುಷೋತ್ತಮನಿಗೆ ನಮಿಸುತ್ತೇನೆ.

ಮಾಯಾಯವನಿಕಾಚ್ಛನ್ನಮಜ್ಞಾಽಧೋಕ್ಷಜಮವ್ಯಯಮ್ ।
ನ ಲಕ್ಷ್ಯಸೇ ಮೂಢದೃಶಾ ನಟೋ ನಾಟ್ಯಧರೋ ಯಥಾ ॥ ೨ ॥

ಮಾಯೆಯೆಂಬ ತೆರೆಯಿಂದ ಮರೆಯಾಗಿರುವವನೂ, ಇಂದ್ರಿಯಗಳಿಗೆ ಅತೀತನೂ ಆದ ನಿನ್ನನ್ನು ಅಜ್ಞಳಾದ ನಾನು ನಮಸ್ಕರಿಸುತ್ತೇನೆ; ಪಾತ್ರವನ್ನು ಧರಿಸಿರುವ ನಟನಂತೆ ಇರುವ ನಿನ್ನನ್ನು ಮೂಢರು ಅರಿಯಲಾರರು.

ತಥಾ ಪರಮಹಂಸಾನಾಂ ಮುನೀನಾಮಮಲಾತ್ಮನಾಮ್ ।
ಭಕ್ತಿಯೋಗವಿಧಾನಾರ್ಥಂ ಕಥಂ ಪಶ್ಯೇಮಹಿ ಸ್ತ್ರಿಯಃ ॥ ೩ ॥

ಮುನಿಗಳೂ ನಿರ್ಮಲ ಬುದ್ಧಿಯುಳ್ಳವರೂ ಆದ ಪರಮಹಂಸರಿಗೆ ಭಕ್ತಿಯೋಗವನ್ನು ಉಪದೇಶಿಸಲು ಅವತಾರ ಮಾಡಿರುವ ನಿನ್ನನ್ನು ನನ್ನಂತಹ ಸ್ತ್ರೀಯರು ಹೇಗೆ ಅರಿಯಬಲ್ಲರು?

ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ ।
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ ॥ ೪ ॥

ಕಮಲನಾಭನಿಗೆ ನಮಸ್ಕಾರ, ಕಮಲಮಾಲೆಗಳನ್ನು ಧರಿಸಿರುವ ನಿನಗೆ ನಮಸ್ಕಾರ, ಕಮಲನೇತ್ರನಿಗೆ ನಮಸ್ಕಾರ, ಪಂಕಜಾಂಘ್ರಿಗೆ ನಮಸ್ಕಾರ.

ವಿಪದಃ ಸಂತು ನಃ ಶಶ್ವತ್ತತ್ರ ತತ್ರ ಜಗದ್ಗುರೋ ।
ಭವತೋ ದರ್ಶನಂ ಯತ್ಸ್ಯಾದಪುನರ್ಭವದರ್ಶನಮ್ ॥ ೫ ॥

ಹೇ ಜಗದ್ಗುರು, ಯಾವ ವಿಪತ್ತುಗಳ ಮೂಲಕ ಪುನರ್ಜನ್ಮವನ್ನು ಉಂಟುಮಾಡದ ನಿನ್ನ ದರ್ಶನವು ಪ್ರಾಪ್ತವಾಗುವುದೋ, ಅಂತಹ ವಿಪತ್ತುಗಳು ನಮಗೆ ಯಾವಾಗಲೂ ಬರಲಿ.

ನಮೋಽಕಿಂಚನವಿತ್ತಾಯ ನಿವೃತ್ತಗುಣವೃತ್ತಯೇ ।
ಆತ್ಮಾರಾಮಾಯ ಶಾಂತಾಯ ಕೈವಲ್ಯಪತಯೇ ನಮಃ ॥ ೬ ॥

ವಿರಕ್ತರನ್ನೇ ಧನವಾಗಿ ತಿಳಿದಿರುವವನೂ, ಗುಣವೃತ್ತಿಗಳಿಂದ ಬಿಡಲ್ಪಟ್ಟವನೂ, ಆತ್ಮಾರಾಮನೂ, ಶಾಂತನೂ, ಕೈವಲ್ಯಪತಿಯೂ ಆದ ನಿನಗೆ ನಮಸ್ಕಾರ.